MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 20-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 7 ದಿನ ಹೆಚ್ಚಳ

ಸತತ 7 ನೇ ದಿನ ಮಲೇಶಿಯನ್ ಪಾಮೆಣ್ಣೆ ಜನವರಿ ಫ್ಯೂಚರ್ ದರ ಹೆಚ್ಚಳವಾಗಿದೆ. ಹವಾಮಾನ ವೈಪರೀತ್ಯದಿಂದ ಉತ್ಪಾದನೆ ಕುಂಠಿತವಾಗುವ ಸಾಧ್ಯತೆ. ಜಾಗತಿಕ ಡಾಲರ್ ಪ್ರಾಬಲ್ಯ ಇವುಗಳಿಂದ ಪಾಮೆಣ್ಣೆ ಪ್ಯೂಚರ್ ದರ ಹೆಚ್ಚಳಗೊಂಡಿದೆಯೆನ್ನಲಾಗಿದೆ.

## ಚಿಕಾಗೋ ಜೋಳ, ಸೋಯಬೀನ್ ದರ ಇಳಿಕೆ

ಹೊಸಬೆಳೆಯ ಕಟಾವಿನ ಒತ್ತಡದಿಂದ ಯು.ಎಸ್‌ನ ಚಿಕಾಗೋ ಮಾರುಕಟ್ಟೆಯಲ್ಲಿ ಜೋಳ ಹಾಗೂ ಸೋಯಾಬೀನ್ ದರ ಇಳಿಕೆಯಾಗಿದೆ. ಆದರೆ ಇಳಿಕೆ ಸೀಮಿತವಾಗಿದೆ.

## ರಾಬಿ ಬೆಳೆಗಳಿಗೆ ಬೆಂಬಲ ಬೆಲೆ ಹೆಚ್ಚಳ

ಕೇಂದ್ರ ಮಂತ್ರಿಮಂಡಲ ಕೆಲವು ರಾಬಿ ಬೆಳೆಗಳ ಬೆಂಬಲ ಬೆಲೆ ಹೆಚ್ಚಳಗೊಳಿಸಿದೆಯೆನ್ನಲಾಗಿದೆ. ಅದರಂತೆ ಗೋಧಿ ಕ್ವಿಂಟಾಲ್‌ಗೆ ರೂ.110, ಬಾರ್ಲಿ ರೂ.100, ಕಡಲೆ ರೂ.105, ಮಸೂರ್ ರೂ. 500, ಸೂರ್ಯಕಾಂತಿ ರೂ.200 ಹಾಗೂ ಸಾಸಿವೆ ರೂ. 400 ದರ ಹೆಚ್ಚಳಗೊಳಿಸಿದೆ.

## ಕಾಳು ಮೆಣಸು ದರ ಸದ್ಯ ಸ್ಥಿರ ಸಾಧ್ಯತೆ

2022 ರಲ್ಲಿ ಜಾಗತಿಕ ಕಾಳುಮೆಣಸು ಉತ್ಪಾದನೆ ಇಳಿಕೆ ಕಾಣಲಿದೆಯೆನ್ನಲಾಗಿದ್ದು, ವಿಯೆಟ್ನಾಂ 2 ಲಕ್ಷ ಟನ್, ಬ್ರೆಜಿಲ್ 105000 ಟನ್, ಭಾರತ 60000 ಟನ್, ಇಂಡೋನೇಶೀಯಾ 50,000 ಟನ್ ಕಾಳುಮೆಣಸು ಉತ್ಪಾದಿಸಬಹುದೆಂದು ಅಂದಾಜಿಸಲಾಗಿದೆಯೆನ್ನಲಾಗಿದೆ. ಇದರೊಂದಿಗೆ 50000 ಟನ್‌ಗಳ ಜಾಗತಿಕ ದಾಸ್ತಾನು ಇರಬಹುದೆನ್ನಲಾಗಿದೆ. ಬೇಡಿಕೆಯಲ್ಲಿ ಅಲ್ಪ ಪ್ರಮಾಣದ ಹೆಚ್ಚಳ ನಿರೀಕ್ಷಿಸಲಾಗಿದೆ. ಸದ್ಯ ಕಾಳುಮೆಣಸು ದರ ಬಹಳ ಸಮಯಗಳಿಂದ ಸುಮಾರಾಗಿ ಸ್ಥಿರವಿದ್ದು, ಸದ್ಯ ಮಾರಾಟವಾಗಾದ ದಾಸ್ತಾನೂ ಇರುವುದರಿಂದ ಸದ್ಯ ದರ ಸ್ಥಿರವಿರಬಹುದೆನ್ನಲಾಗಿದೆ.

## 2022-23 ರಲ್ಲಿ ಬ್ರೆಜಿಲ್‌ನ ಕಾಫಿ ಉತ್ಪಾದನೆ ಹೆಚ್ಚಳ

ಯು.ಎಸ್.ಡಿ.ಎ ಯ ಅಂದಾಜಿನಂತೆ 202-23 ರ ಬೆಳೆಯಲ್ಲಿ ಬ್ರೆಜಿಲ್‌ನ ಕಾಫಿ ಉತ್ಪಾದನೆ 64.3 ಮಿಲಿಯನ್ ಚೀಲ(60ಕೆ.ಜಿ) ಗಳಾಗಬಹುದೆನ್ನಲಾಗಿದೆ. ಅಮೇರಿಕನ್ ಡಾಲರ್ ಸದ್ಯದ ಪರಿಸ್ಥಿತಿಯಲ್ಲಿ ಪ್ರಬಲವಾಗುತ್ತಿದೆ. ಇನ್ನೊಂದಡೆ ಸದ್ಯ ಕಾಫಿಯ ಜಾಗತಿಕ ಇನ್ವೆಂಟರಿ ದಾಸ್ತಾನು ಇಳಿಕೆಯಾಗುತ್ತಿದೆ. ICC ಸರ್ಟಿಫೈಡ್ ದಾಸ್ತಾನು 37.2 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಅರೆಬಿಕಾ ಕಾಫಿ ದಾಸ್ತಾನು 0.45 ಮಿಲಿಯನ್ ಚೀಲಗಳಾಗಿದ್ದು, ರಾಬೆಸ್ಟಾ ಕಾಫಿ ದಾಸ್ತಾನು 0.8 ಶೇಕಡಾ ಇಳಿಕೆಯಾಗಿ 1.59 ಮಿಲಿಯನ್ ಚೀಲಗಳಾಗಿವೆಯೆನ್ನಲಾಗಿದೆ. ಸದ್ಯ ಮಾರುಕಟ್ಟೆಯಲ್ಲಿ ಪೂರೈಕೆ ಉತ್ತಮವಿದೆಯೆನ್ನಲಾಗಿದ್ದು ದರ ಮುಂದಿನ ದಿನಗಳಲ್ಲಿ ಇಳಿಕೆ ಕಾಣುವ ಸಾಧ್ಯತೆಯೆನ್ನಲಾಗಿದೆ.

## 2022-23 ರಲ್ಲಿ ದೇಶದ ಸಕ್ಕರೆ ಉತ್ಪಾದನೆ 36.5 ಮಿಲಿಯನ್ ಟನ್‌ಗಳು- ISMA

2022-23 ರಲ್ಲಿ ಭಾರತದ ಸಕ್ಕರೆ ಉತ್ಪಾದನೆ 36.5 ಮಿಲಿಯನ್ ಟನ್‌ಗಳಾಗಲಿದೆಯೆನ್ನಲಾಗಿದೆಯೆಂದು ISMA ಅಂದಾಜಿಸಿದೆಯೆನ್ನಲಾಗಿದೆ(ಹಿಂದಿನ ವರ್ಷಕ್ಕಿಂತ 2 ಶೇಕಡಾ ಹೆಚ್ಚಳ). ಉತ್ತರ ಪ್ರದೇಶ 12.3 ಮಿಲಿಯನ್ ಟನ್, ಮಹಾರಾಷ್ಟ್ರ 15 ಮಿಲಿಯನ್ ಟನ್ ಹಾಗೂ ಕರ್ನಾಟಕ 7 ಮಿಲಿಯನ್ ಟನ್ ಸಕ್ಕರೆ ಉತ್ಪಾದಿಸಲಾಗಿದೆಯೆನ್ನಲಾಗಿದೆ.

## ಜಾಗತಿಕ ಸೋಯಾಮೀಲ್ ವ್ಯವಹಾರ 2 ಮಿಲಿಯನ್ ಟನ್ ಹೆಚ್ಚಳ

2021-22 ರಲ್ಲಿ ಜಾಗತಿಕ ಸೋಯಾಮೀಲ್ ವ್ಯವಹಾರ 2020-21 ರಲ್ಲಾಗಿದ್ದ 59.3 ಮಿಲಿಯನ್ ಟನ್ ಗಳಿಂದ 61.07 ಮಿಲಿಯನ್ ಟನ್‌ಗಳಿಗೆ ಹೆಚ್ಚಳಗೊಂಡಿದೆಯೆಂದು ಹ್ಯಾಂಬರ್ಗ್ ಎನಾಲಿಟಿಕಲ್ ಏಜೆನ್ಸಿ ಆಯಿಲ್ ವರ್ಲ್ಡ್(ಜರ್ಮನಿ) ತನ್ನ ವರದಿಯಲ್ಲಿ ಹೇಳಿದೆಯೆನ್ನಲಾಗಿದೆ. ಅರ್ಜೆಂಟಿನಾ 26.7 ಮಿಲಿಯನ್ ಟನ್, ಬ್ರೆಜಿಲ್ 20.3. ಮಿಲಿಯನ್ ಟನ್, ಯು,ಎಸ್ 12.33 ಮಿಲಿಯನ್ ಟನ್ ಪೂರೈಕೆ ಮಾಡಿದೆಯೆನ್ನಲಾಗಿದೆ.